ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಗುರುವಾರ, ೦೧, ಜನವರಿ, ೨೦೨೬ (ಪುಷ್ಯ, ೧೧, ಶಕವರ್ಷ, ೧೯೪೭)	ಸಂಚಿಕೆ ೦೧
Volume - 161	BENGALURU, THURSDAY, 01, JANUARY, 2026 (PUSHYA , 11, SHAKAVARSHA, 1947)	Issue 01

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಹಿರೇಮಠ ಗುರುಲಿಂಗಯ್ಯ ಮಹಂತಯ್ಯ, ವಕೀಲರು ಮತ್ತು ನೋಟರಿ, ಹೂವಿನಹಡಗಲಿ ಕಂದಾಯ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ಹೆಸರನ್ನು ರಾಜ್ಯ ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 138 ಎಲ್‌ಸಿಎಲ್ 1998, ದಿನಾಂಕ : 12-08-1998.
(2) ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/134/2021, ದಿನಾಂಕ : 14-02-2023.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: 2907/2023/ಆಡಳಿತ, ದಿನಾಂಕ : 03-06-2023.
(4) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಆಡಳಿತ/2337/2025, ದಿನಾಂಕ : 03-06-2025.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 12-08-1998ರ ಆದೇಶದಲ್ಲಿ ಶ್ರೀ ಹಿರೇಮಠ ಗುರುಲಿಂಗಯ್ಯ ಮಹಂತಯ್ಯ, ವಕೀಲರು ಇವರನ್ನು ಹೂವಿನಹಡಗಲಿ ಕಂದಾಯ ತಾಲ್ಲೂಕು, ಬಳ್ಳಾರಿ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ : 14-02-2023ರ ಪತ್ರದಲ್ಲಿ ರಾಜ್ಯ ಸರ್ಕಾರದಿಂದ ನೋಟರಿಯಾಗಿ ನೇಮಕಾತಿಗೊಂಡು ಬಳ್ಳಾರಿ ಜಿಲ್ಲೆ ವ್ಯಾಪ್ತಿಯ ವಿವಿಧ ಕಂದಾಯ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸದೇ ಇವರು ನೋಟರಿಗಳ ಮಾಹಿತಿಯನ್ನು ಒದಗಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರಿಗೆ ಪತ್ರ ಬರೆಯಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ : 03-06-2023ರ ಪತ್ರದಲ್ಲಿ **ಶ್ರೀ ಹಿರೇಮಠ ಗುರುಲಿಂಗಯ್ಯ ಮಹಂತಯ್ಯ,** ವಕೀಲರು ಮತ್ತು ನೋಟರಿ, ಹೂವಿನ ಹಡಗಲಿ ಕಂದಾಯ ತಾಲ್ಲೂಕು ಇವರಿಗೆ ಕಳೆದ 2 ವರ್ಷದ ಹಿಂದೆ ಹೃದಯ ಸಂಬಂಧಿತ ಶಸ್ತ್ರ ಚಿಕಿತ್ಸೆ ಆಗಿದ್ದು ಹಾಗೂ ಸಂದಿವಾತದ ಕಾಯಿಲೆ ಇರುವುದರಿಂದ 2021ನೇ ಇಸ್ವಿಯಿಂದ ಇಲ್ಲಿಯವರೆಗೆ ನೋಟರಿ ಕೆಲಸವನ್ನು ಅನಾರೋಗ್ಯದ ನಿಮಿತ್ಯ ಕಾರ್ಯನಿರ್ವಹಿಸಲು ಸಾಧ್ಯವಾಗಿರುವುದಿಲ್ಲವೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ದಿನಾಂಕ : 03-06-2025ರ ಪತ್ರದಲ್ಲಿ ಶ್ರೀ ಹಿರೇಮಠ ಗುರುಲಿಂಗಯ್ಯ ಮಹಂತಯ್ಯ, ವಕೀಲರು ಮತ್ತು ನೋಟರಿ ಇವರು ಇತ್ತೀಚಿನ ದಿನಗಳಲ್ಲಿ ಅನಾರೋಗ್ಯದ ಕಾರಣದಿಂದಾಗಿ ಯಾವುದೇ ನೋಟರಿ ವೃತ್ತಿಯನ್ನು ಮಾಡುತ್ತಿರುವುದಿಲ್ಲ ಮತ್ತು ಈವರೆವಿಗೂ ಸಹ ನೋಟರಿ ವೃತ್ತಿಯಲ್ಲಿ ಅವರ ವಿರುದ್ಧ ಸಾರ್ವಜನಿಕರಿಂದಾಗಲಿ ಅಥವಾ ಯಾವುದೇ ವಕೀಲರಿಂದಾಗಲಿ ದೂರುಗಳು ಸ್ವೀಕೃತವಾಗಿರುವುದಿಲ್ಲವೆಂದು ಹಡಗಲಿ ವಕೀಲರ ಸಂಘದ ಅಧ್ಯಕ್ಷರು ವರದಿ ಮಾಡಿರುವುದಾಗಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಯ, ಹಡಗಲಿ ಇವರು ಪತ್ರದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರಿಗೆ ವರದಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ಅಧ್ಯಕ್ಷರು, ಹೂವಿನಹಡಗಲಿ ವಕೀಲರ ಸಂಘ, ಬಳ್ಳಾರಿ ಜಿಲ್ಲೆ ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ ಜಿಲ್ಲೆ ಇವರು ಸಲ್ಲಿಸಿರುವ ಪತ್ರಗಳನ್ನು ನೋಟರಿಗಳ ಕಾಯ್ದೆ 1952ರ ಸೆಕ್ಷನ್ 10(f) ರನ್ವಯ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/124/2023,
ಬೆಂಗಳೂರು, ದಿನಾಂಕ : 22-12-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಹಿರೇಮಠ ಗುರುಲಿಂಗಯ್ಯ ಮಹಂತಯ್ಯ,** ವಕೀಲರು ಮತ್ತು ನೋಟರಿ, **ಹೂವಿನಹಡಗಲಿ ಕಂದಾಯ ತಾಲ್ಲೂಕು, ಬಳ್ಳಾರಿ ಜಿಲ್ಲೆ** ಇವರು ನೋಟರಿ ವೃತ್ತಿ ನಿರ್ವಹಿಸದೇ ಇರುವುದರಿಂದ ಹಾಗೂ ನೋಟರಿ ವೃತ್ತಿ ಪ್ರಮಾಣ ಪತ್ರ ನವೀಕರಿಸಿಕೊಳ್ಳದೇ ಇರುವುದರಿಂದ ನೋಟರಿಗಳ ಕಾಯ್ದೆ 1952ರ ಸೆಕ್ಷನ್ 10(f) ರನ್ವಯ ಅವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-01

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಕೆ. ಎನ್. ಹೆಗಡೆ, ವಕೀಲರು ಮತ್ತು ನೋಟರಿ, ಯಲ್ಲಾಪುರ ಕಂದಾಯ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 154 ಎಲ್‌ಸಿಎಲ್ 1996, ದಿನಾಂಕ : 22-05-1997.
(2) ಶ್ರೀ ಕೆ. ಎನ್. ಹೆಗಡೆ, ವಕೀಲರು ಮತ್ತು ನೋಟರಿ ಇವರು ಸಲ್ಲಿಸಿರುವ ದಿನಾಂಕ : 01-01-2025ರ ರಾಜೀನಾಮೆ ಪತ್ರ.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಆಡಳಿತ 2/3286/2025, ದಿನಾಂಕ : 05-07-2025.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 22-05-1997ರ ಆದೇಶದಲ್ಲಿ ಶ್ರೀ ಕೆ. ಎನ್. ಹೆಗಡೆ, ವಕೀಲರು ಇವರನ್ನು ಯಲ್ಲಾಪುರ ಕಂದಾಯ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ : 01-01-2025ರ ರಾಜೀನಾಮೆ ಪತ್ರದಲ್ಲಿ ಶ್ರೀ ಕೆ. ಎನ್. ಹೆಗಡೆ, ವಕೀಲರು ಮತ್ತು ನೋಟರಿ ಇವರು ನೋಟರಿಯಾಗಿ ಮುಂದುವರೆಯಲು ಇಚ್ಛಿಸದೇ ಇರುವುದರಿಂದ ನೋಟರಿ ವೃತ್ತಿಗೆ ರಾಜೀನಾಮೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೇ, ಈ ಹಿಂದೆ ಸರ್ಕಾರದಿಂದ ದಿನಾಂಕ : 16-12-2020 ರಂದು ವಿತರಿಸಿದ ನವೀಕರಿಸಿದ ನೋಟರಿ ವೃತ್ತಿ ಪ್ರಮಾಣದ ಮೂಲ ಪತ್ರವನ್ನು ಸರ್ಕಾರಕ್ಕೆ ಅಧ್ಯರ್ಪಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ದಿನಾಂಕ : 05-07-2025ರ ಪತ್ರದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ ಜಿಲ್ಲೆ ಇವರು ಶ್ರೀ ಕೆ. ಎನ್. ಹೆಗಡೆ, ವಕೀಲರು ಮತ್ತು ನೋಟರಿ ಇವರ ವಿರುದ್ಧ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ ಅಥವಾ ಬಾಕಿ ಇರುವುದಿಲ್ಲ ಎಂಬ ವರದಿಯನ್ನು ಹಿರಿಯ ಸಿವಿಲ್ ನ್ಯಾಯಾಧೀಶರು, ಯಲ್ಲಾಪುರ ಮತ್ತು ಅಧ್ಯಕ್ಷರು, ಯಲ್ಲಾಪುರ ವಕೀಲರ ಸಂಘ ಇವರುಗಳಿಂದ ಮಾಹಿತಿ ಪಡೆದು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ನೋಟರಿಗಳ ಅಧಿನಿಯಮ, 1952ರ ಸೆಕ್ಷನ್ 10 ರನ್ವಯ ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/39/2025, ಬೆಂಗಳೂರು, ದಿನಾಂಕ : 22-12-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಕೆ. ಎನ್. ಹೆಗಡೆ,** ವಕೀಲರು ಮತ್ತು ನೋಟರಿ, **ಯಲ್ಲಾಪುರ ಕಂದಾಯ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ** ಇವರು ನೋಟರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಮತ್ತು ಸದರಿಯವರ ಹೆಸರನ್ನು ನೋಟರಿಗಳ ಅಧಿನಿಯಮ 1952ರ ಕಲಂ 10 (ಎ) ರೀತ್ಯಾ ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-02

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ. ಎನ್. ರಮೇಶ, ವಕೀಲರು ಮತ್ತು ನೋಟರಿ, ತೀರ್ಥಹಳ್ಳಿ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 280 ಎಲ್‌ಸಿಎಲ್ 1998, ದಿನಾಂಕ : 18-12-1998.
(2) ಶ್ರೀ ಎಂ. ಎನ್. ರಮೇಶ, ವಕೀಲರು ಮತ್ತು ನೋಟರಿ ಇವರು ಸಲ್ಲಿಸಿರುವ ದಿನಾಂಕ : 22-07-2021ರ ರಾಜೀನಾಮೆ ಪತ್ರ.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಆಜಿಸನ್ಯಾ/14686/2023, ದಿನಾಂಕ : 03-07-2023.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 18-12-1998ರ ಆದೇಶದಲ್ಲಿ ಶ್ರೀ ಎಂ. ಎನ್. ರಮೇಶ, ವಕೀಲರು ಇವರನ್ನು ತೀರ್ಥಹಳ್ಳಿ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ : 22-07-2021ರ ರಾಜೀನಾಮೆ ಪತ್ರದಲ್ಲಿ ಈ ಹಿಂದೆ ಶ್ರೀ ಎಂ. ಎನ್. ರಮೇಶ್, ವಕೀಲರು ಮತ್ತು ನೋಟರಿ ಇವರಿಗೆ ದಿನಾಂಕ : 25-02-2012 ರಂದು ನವೀಕರಿಸಿದ ವೃತ್ತಿ ಪ್ರಮಾಣ ಪತ್ರ ವಿತರಿಸಿದ್ದು, ಸದರಿ ಪ್ರಮಾಣ ಪತ್ರವು ದಿನಾಂಕ : 25-02-2017 ರಂದು ಮುಕ್ತಾಯಗೊಂಡಿರುವುದಾಗಿ ತಿಳಿಸುತ್ತಾ, ದಿನಾಂಕ : 01-01-2014 ರಿಂದಲೇ ನೋಟರಿ ವೃತ್ತಿ ನಿರ್ವಹಿಸುತ್ತಿಲ್ಲವೆಂದು ಪ್ರಸ್ತಾಪಿಸಿ, ಹಲವಾರು ರಾಜ್ಯ ಮತ್ತು ಕೇಂದ್ರ ನೋಟರಿಗಳನ್ನು ತಾಲ್ಲೂಕಿನಲ್ಲಿ ನೇಮಿಸಿರುವುದರ ಕಾರಣ ನೋಟರಿ ಕೆಲಸಗಳನ್ನು ಪಡೆದುಕೊಳ್ಳಲು ಅವಕಾಶವಿಲ್ಲದಂತಾಗಿದೆ ಎಂದು ತಿಳಿಸಿ, ನೋಟರಿ ವೃತ್ತಿಯನ್ನು ಮುಂದುವರೆಸಲು ನವೀಕರಣ ಅರ್ಜಿ ಸಲ್ಲಿಸಿರುವುದಿಲ್ಲವೆಂದು ತಿಳಿಸುತ್ತಾ, ನೋಟರಿ ಅವಧಿ ಮುಕ್ತಾಯಗೊಂಡ ನಂತರದಿಂದ ನೋಟರಿ ಕಾರ್ಯ ನಿರ್ವಹಿಸಿರುವುದಿಲ್ಲವೆಂದು ರಾಜೀನಾಮೆ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ದಿನಾಂಕ : 03-07-2023ರ ಪತ್ರದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಜಿಲ್ಲೆ ಇವರು ಶ್ರೀ ಎಂ. ಎನ್. ರಮೇಶ, ವಕೀಲರು ಮತ್ತು ನೋಟರಿ ಇವರ ವಿರುದ್ಧ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ ಅಥವಾ ಬಾಕಿ ಇರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

ನೋಟರಿಗಳ ಅಧಿನಿಯಮ, 1952ರ ಸೆಕ್ಷನ್ 10 ರನ್ವಯ ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/109/2023, ಬೆಂಗಳೂರು, ದಿನಾಂಕ : 18-12-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಎಂ. ಎನ್. ರಮೇಶ್,** ವಕೀಲರು ಮತ್ತು ನೋಟರಿ, **ತೀರ್ಥಹಳ್ಳಿ ಕಂದಾಯ ತಾಲ್ಲೂಕು, ಶಿವಮೊಗ್ಗ ಜಿಲ್ಲೆ** ಇವರು ನೋಟರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಮತ್ತು ಸದರಿಯವರ ಹೆಸರನ್ನು ನೋಟರಿಗಳ ಅಧಿನಿಯಮ 1952ರ ಕಲಂ 10 (ಎ) ರೀತ್ಯಾ ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್. ವನಿತ)
ಸರ್ಕಾರದ ಉಪ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-03

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ವಡ್ಡಾಳ್ ಜಗದೀಶ್, ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ ಇವರ ನೇಮಕಾತಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 125 ಇಎನ್‌ವಿ 2003, ದಿನಾಂಕ: 19.06.2003.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 3 ಸನಿತಿ 2015, ದಿನಾಂಕ: 03.08.2015
3. ಸರ್ಕಾರದ ಆದೇಶ ಸಂಖ್ಯೆ: ಸಾಆಇ 21 ಎಸ್‌ಪಿಯು 2015, ದಿನಾಂಕ: 09.09.2015.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 219 ಇಎನ್‌ವಿ 2025, ದಿನಾಂಕ: 30.09.2025.

******

ಪ್ರಸ್ತಾವನೆ:

ಜೈವಿಕ ವೈವಿಧ್ಯ ಅಧಿನಿಯಮ 2002 ಮತ್ತು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005ರ ಅನುಸಾರ ಮೇಲೆ ಓದಲಾದ (1) ರ ಸರ್ಕಾರದ ಆದೇಶಾನುಸಾರ ಕರ್ನಾಟಕ ಜೀವವೈವಿಧ್ಯ ಮಂಡಳಿಯನ್ನು ಸ್ಥಾಪಿಸಲಾಗಿದೆ.

ಮೇಲೆ ಓದಲಾದ (3) ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಸಾರ್ವಜನಿಕ ಉದ್ದಿಮೆಗಳ (ನಿಗಮ / ಮಂಡಳಿಗಳ ಹಾಗೂ ಶಾಸನಬದ್ಧ ಸಂಸ್ಥೆಗಳು) ಅಧಿಕಾರೇತರ ಅಧ್ಯಕ್ಷರುಗಳು / ಉಪಾಧ್ಯಕ್ಷರುಗಳಿಗೆ ನೀಡಲಾಗುವ ಗೌರವಧನ / ಸಂಭಾವನೆ ಮತ್ತು ವಿಶೇಷ ಸೌಲಭ್ಯಗಳನ್ನು ಪರಿಷ್ಕರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (4) ರ ಸರ್ಕಾರದ ಅಧಿಸೂಚನೆಯಲ್ಲಿ ಜೈವಿಕ ವೈವಿಧ್ಯ ಅಧಿನಿಯಮ, 2002ರ ಪ್ರಕರಣ 22ರ ಉಪ ಪ್ರಕರಣ 4 (3) ರ ರೀತ್ಯಾ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005 ರ ನಿಯಮ 3ರ ಅನುಸಾರ, ಶ್ರೀ ವಡ್ಡಾಳ್ ಜಗದೀಶ್ ಇವರನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿ ಇವರ ನೇಮಕಾತಿಯ ಕುರಿತು ಷರತ್ತು ಮತ್ತು ನಿಬಂಧನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿದೆ.

ಅದರನ್ವಯ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ವಡ್ಡಾಳ್ ಜಗದೀಶ್ ರವರಿಗೆ ಭತ್ಯೆ ಮತ್ತು ಸವಲತ್ತುಗಳನ್ನು ನೀಡುವ ಬಗ್ಗೆ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 219 ಇಎನ್‌ವಿ 2025
ಬೆಂಗಳೂರು, ದಿನಾಂಕ: 22.12.2025.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಜೈವಿಕ ವೈವಿಧ್ಯ ಅಧಿನಿಯಮ, 2002 ಮತ್ತು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು 2005 ರ ನಿಯಮ 5(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರ ಹುದ್ದೆಗೆ ನೇಮಕಗೊಂಡಿರುವ ಶ್ರೀ ವಡ್ಡಾಳ್ ಜಗದೀಶ್ ರವರಿಗೆ ಷರತ್ತು ಮತ್ತು ನಿಬಂಧನೆಗಳನ್ನು ಈ ಕೆಳಕಂಡಂತೆ ನೀಡಲು ಆದೇಶಿಸಲಾಗಿದೆ.

1. **<u>ನೇಮಕಾತಿಯ ಕಾರ್ಯಾವಧಿ:</u>**
ಶ್ರೀ ವಡ್ನಾಳ್ ಜಗದೀಶ್, ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ ಇವರ ಕಾರ್ಯಾವಧಿಯನ್ನು ಮೇಲೆ ಓದಲಾದ ಉಲ್ಲೇಖ (4) ರ ಸರ್ಕಾರದ ಅಧಿಸೂಚನೆಯಲ್ಲಿ ನಿಗಧಿಗೊಳಿಸಲಾಗಿರುತ್ತದೆ.

2. **<u>ಸಂಭಾವನೆ:</u>**
ಮಾಸಿಕ ರೂ. 40,000/-

3. **<u>ಮನೆ ಬಾಡಿಗೆ ಭತ್ಯೆ:</u>**
ಅಧ್ಯಕ್ಷರು ಬೆಂಗಳೂರಿನಲ್ಲಿ ನೆಲೆಸಿದ್ದಲ್ಲಿ ಮಾಸಿಕ ರೂ. 25,000/- ಅಥವಾ ಒತರೆ ಪ್ರದೇಶದಲ್ಲಿ ನೆಲೆಸಿದ್ದಲ್ಲಿ ರೂ. 15,000/- ಗಳ ಮನೆ ಬಾಡಿಗೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

4. **<u>ಪೀಠೋಪಕರಣಗಳು:</u>**
ಅಧ್ಯಕ್ಷರು ಪೀಠೋಪಕರಣಗಳನ್ನು ರೂ. 30,000/- ಕ್ಕೆ ಮೀರದಂತೆ ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ಖರೀದಿಸಬಹುದು. ಅವರ ಅಧಿಕಾರದ ಅವಧಿ ಮುಗಿದ ಕೂಡಲೇ ಮಂಡಳಿಗೆ ಪೀಠೋಪಕರಣಗಳನ್ನು ಹಿಂದಿರುಗಿಸತಕ್ಕದ್ದು.

5. **<u>ಆಪ್ತ ಸಿಬ್ಬಂದಿ:</u>**
ಅಧ್ಯಕ್ಷರು ಮಂಡಳಿಯಿಂದ ಲಭ್ಯವಿರುವ ಒಬ್ಬ ಆಪ್ತ ಕಾರ್ಯದರ್ಶಿ, ಒಬ್ಬ ಆಪ್ತ ಸಹಾಯಕ, ಒಬ್ಬ ದಲಾಯತ್ ಮತ್ತು ಒಬ್ಬ ಚಾಲಕ (ಅಗತ್ಯವಿದ್ದಲ್ಲಿ) ರನ್ನುಹೊಂದಬಹುದು.

6. **<u>ವಾಹನ ಸೌಕರ್ಯ:</u>**
ಅಧ್ಯಕ್ಷರು ಮಂಡಳಿಯ ಒಂದು ವಾಹನವನ್ನು ಉಪಯೋಗಿಸಲು ಅರ್ಹರಿರುತ್ತಾರೆ.

7. **<u>ದೂರವಾಣಿ:</u>**
ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ಅನ್ವಯವಾಗುವ ರೀತಿಯ ಗೃಹ ಬಳಕೆ ದೂರವಾಣಿ ಮತ್ತು ಮೊಬೈಲ್ ಫೋನ್ ವೆಚ್ಚಗಳನ್ನು ಪಡೆಯಲು ಅಧ್ಯಕ್ಷರು ಅರ್ಹರಾಗಿರುತ್ತಾರೆ.

8. **<u>ಪ್ರವಾಸ ಭತ್ಯೆ ಮತ್ತು ದಿನ ಭತ್ಯೆ:</u>**
ಮಂಡಳಿಯ ನಿಯಮಾನುಸಾರ ಪ್ರವಾಸ ಮತ್ತು ದಿನ ಭತ್ಯೆಗಳನ್ನು ಪಡೆಯಲು ಅಧ್ಯಕ್ಷರು ಅರ್ಹರಾಗಿರುತ್ತಾರೆ.

9. **<u>ವಿದೇಶ ಪ್ರವಾಸ:</u>**
ಅಧ್ಯಕ್ಷರು ಕಾಲಾವಧಿಯಲ್ಲಿ ಅವರ ಸ್ವಂತ ಖರ್ಚಿನಿಂದಾಗಲೀ ಅಥವಾ ಸರ್ಕಾರ / ಪ್ರಾಯೋಜಿತ ಸಂಸ್ಥೆಗಳಿಂದಾಗಲೀ ವಿದೇಶ ಪ್ರವಾಸವನ್ನು ಕೈಗೊಳ್ಳಲು ಸರ್ಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 885 ವೆಚ್ಚ-5 2025 ದಿನಾಂಕ: 09.12.2025 ರನ್ವಯ ನೀಡಿದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಸದಾನಂದ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಜೀವಿಪರಿಸ್ಥಿತಿ ಮತ್ತು ಪರಿಸರ),
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ

PR-04

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :-ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :- 1. ಸರ್ಕಾರದ ಆದೇಶ ಸಂಖ್ಯೆ: ಸಿಒ 281 ಸಿಎಸ್‌ಆರ್ 2025 ಬೆಂಗಳೂರು, ದಿನಾಂಕ:30.09.2025.

2. ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್‌ಬಿ-2/ಸ.ಸಂಸ್ಥೆ/ಕಲಂ.-25/04/2025-26, ದಿನಾಂಕ:29.12.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ಸಂಘಕ್ಕೆ ಶ್ರೀಮತಿ. ಕೆ.ಎಂ. ಗಾಯಿತ್ರಿ, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 03 ತಿಂಗಳ ಅವಧಿಗೆ **ಅಥವಾ** ಕಲಂ.25ರ ವಿಚಾರಣೆ ಪೂರ್ಣಗೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2) ರ ಉಪ ನಿಬಂಧಕರ ಪತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಈ ಸಂಘಕ್ಕೆ ಸರ್ಕಾರದ ದಿನಾಂಕ:30.09.2025ರ ಆದೇಶದಲ್ಲಿ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ. ಸದರಿ ಆದೇಶದ ಬಗ್ಗೆ ಸಂಘದ ಆಡಳಿತಾಧಿಕಾರಿಗಳು ಮುಂದಿನ ನಿರ್ದೇಶನ ಕೋರಿರುತ್ತಾರೆ. ಆಡಳಿತಾಧಿಕಾರಿಗಳ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:29086/2025ರ ವಿಚಾರಣೆ ನಡೆಯುತ್ತಿದ್ದು, ದಿನಾಂಕ:08.12.2025 ರಂದು ನಡೆದ ವಿಚಾರಣೆಯಲ್ಲಿ, ಕಲಂ 25 ರ ವಿಚಾರಣೆಯು ಅಂತಿಮಗೊಳ್ಳದೆ ಇರುವ ಕಾರಣದಿಂದ ಕಾಲಾವಕಾಶವನ್ನು ಕೋರಲಾಗಿರುತ್ತದೆ. ಮಾನ್ಯ ನ್ಯಾಯಾಲಯವು ಕಲಂ 25 ರ ವಿಚಾರಣಾ ವರದಿಯನ್ನು ದಿನಾಂಕ:13.01.2026 ರಂದು ಸಲ್ಲಿಸಲು ಆದೇಶಿಸಿರುತ್ತದೆ. ಕಲಂ 25 ರ ವಿಚಾರಣೆಯಲ್ಲಿ ಸಂಘದ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಿಂದ ಪರಿಶೀಲನಾ ವರದಿಯನ್ನು ಪಡೆದು ವಿಚಾರಣೆಯನ್ನು ಅಂತಿಮಗೊಳಿಸಬೇಕಾಗಿರುವುದರಿಂದ ಸದರಿ ವಿಚಾರಣೆಯು ಪೂರ್ಣಗೊಂಡಿರುವುದಿಲ್ಲ. ಸದರಿ ವಿಚಾರಣೆಯನ್ನು ಪೂರ್ಣಗೊಳಿಸಲು ಕಾಲಾವಕಾಶ ಬೇಕಾಗಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ನೇಮಿಸಲಾಗಿರುವ ಆಡಳಿತಾಧಿಕಾರಿಯ ಅವಧಿಯನ್ನು ಮುಂದುವರೆಸುವಂತೆ ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯು ದಿನಾಂಕ:29.12.2025ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ ಉಪ ನಿಬಂಧಕರ

ವರದಿಯಂತೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ.25ರಡಿಯ ವಿಚಾರಣೆಯು ಪೂರ್ಣಗೊಂಡಿರುವುದಿಲ್ಲ. ಸಂಘದ ವಿರುದ್ಧ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ.25ರಡಿಯ ವಿಚಾರಣೆಯು ಪೂರ್ಣಗೊಳಿಸಲು ಕಾಲಾವಕಾಶದ ಅಗತ್ಯತೆ ಇರುವ ಹಿನ್ನೆಲೆಯಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) (1)ರನ್ವಯ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:30.12.2025 ರಿಂದ ಮುಂದಿನ 03 ತಿಂಗಳ ಅವಧಿಗೆ **ಅಥವಾ** ಕಾಯ್ದೆಯ ಕಲಂ.25ರ ವಿಚಾರಣೆ ಪೂರ್ಣಗೊಂಡು, ವಿಚಾರಣಾ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿ, ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಆದೇಶದಂತೆ ಹಾಗೂ ನಂತರ ಸದರಿ ವಿಚಾರಣಾ ವರದಿಯನ್ನಾಧರಿಸಿ ಸಕ್ಷಮ ಪ್ರಾಧಿಕಾರಿಯಾಗಿರುವ ಜಿಲ್ಲಾ ನೋಂದಣಾಧಿಕಾರಿಗಳು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸುವ ವರದಿಯಂತೆ ಸರ್ಕಾರದಿಂದ ಅಂತಿಮ ತೀರ್ಮಾನವಾಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 281 ಸಿಎಸ್‌ಆರ್ 2025

ಬೆಂಗಳೂರು, ದಿನಾಂಕ: 30.12.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:29.12.2025 ರಿಂದ ಮುಂದಿನ 03 ತಿಂಗಳ ಅವಧಿಗೆ **ಅಥವಾ** ಕಾಯ್ದೆಯ ಕಲಂ.25ರ ವಿಚಾರಣೆ ಪೂರ್ಣಗೊಂಡು, ವಿಚಾರಣಾ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿ, ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಆದೇಶದಂತೆ ಹಾಗೂ ನಂತರ ಸದರಿ ವಿಚಾರಣಾ ವರದಿಯನ್ನಾಧರಿಸಿ ಸಕ್ಷಮ ಪ್ರಾಧಿಕಾರಿಯಾಗಿರುವ ಜಿಲ್ಲಾ ನೋಂದಣಾಧಿಕಾರಿಗಳು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸುವ ವರದಿಯಂತೆ ಸರ್ಕಾರದಿಂದ ಅಂತಿಮ ತೀರ್ಮಾನವಾಗುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-05

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ದಿ ಮಲ್ಲೇಶ್ವರಂ ಅಸೋಸಿಯೇಷನ್, ಮಲ್ಲೇಶ್ವರಂ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :- 1. ಸರ್ಕಾರದ ಆದೇಶ ಸಂಖ್ಯೆ: ಸಿಒ 103 ಸಿಎಸ್ಆರ್ 2024 ಬೆಂಗಳೂರು, ದಿನಾಂಕ: 05.10.2024.

2. ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಡಿಆರ್‌ಬಿ-4/ಎಸ್.ಒ.ಆರ್/ಆ.ಅ/2024-25, ದಿನಾಂಕ:09.10.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ದಿ ಮಲ್ಲೇಶ್ವರಂ ಅಸೋಸಿಯೇಷನ್, ಮಲ್ಲೇಶ್ವರಂ, ಬೆಂಗಳೂರು ಈ ಸಂಘಕ್ಕೆ ಶ್ರೀ ಎನ್. ಮಂಜುನಾಥ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರಗಳಲ್ಲಿ ಸಂಘದ ವಿರುದ್ಧ ಹೆಚ್ಚುವರಿ ಆರೋಪಗಳ ವಿಚಾರಣೆ ಪ್ರಗತಿ ಹಂತದಲ್ಲಿರುವುದರಿಂದ ಹಾಗೂ ಕಳೆದ ಮೂರು ವರ್ಷಗಳ ಆಡಿಟ್ ವರದಿ ವಾರ್ಷಿಕ ಮಹಾಸಭೆಗೆ ಮತ್ತು ಚುನಾವಣೆಗೆ ಸಿದ್ಧತೆ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ಸಂಘದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಕಾಲಾವಕಾಶದ ಅವಶ್ಯಕತೆ ಇರುವುದರಿಂದ ಸಂಘದ ಆಡಳಿತಾಧಿಕಾರಿಯವರ ಅವಧಿಯನ್ನು ನವೆಂಬರ್ 2025ರ ಅಂತ್ಯದವರೆಗೆ ಅವಧಿಯನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿಯ ಅವಧಿಯು ದಿನಾಂಕ:04.04.2025ಕ್ಕೆ ಮುಕ್ತಾಯಗೊಂಡಿರುವುದರಿಂದ, ಉಪ ನಿಬಂಧಕರ ಕೋರಿಕೆಯಂತೆ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ: 05.04.2025 ರಿಂದ 04.10.2025 ರವರೆಗೆ ಮತ್ತು ದಿನಾಂಕ:05.10.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 103 ಸಿಎಸ್ಆರ್ 2024

ಬೆಂಗಳೂರು, ದಿನಾಂಕ: 17.11.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ದಿ ಮಲ್ಲೇಶ್ವರಂ ಅಸೋಸಿಯೇಷನ್, ಮಲ್ಲೇಶ್ವರಂ, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ: 05.04.2025 ರಿಂದ 04.10.2025ರವರೆಗೆ ಮತ್ತು ದಿನಾಂಕ:05.10.2025 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-06

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಜೆ.ಪಿ ನಗರ ಶರಣ ವೇದಿಕೆ, ಮೈಸೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-
1) ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್.ಸಿ.ಎಸ್.:ಜಂ.ನಿ.:ಐಸಿಡಿಪಿ:ಸಂ.ಸಂ.-1:ಅ.ನೇ.:10:2024-25, ದಿನಾಂಕ:18.05.2024.
2) ಸರ್ಕಾರದ ನೋಟೀಸ್ ಸಂ: ಸಿಒ 73 ಸಿಎಸ್ಆರ್ 2024, ದಿನಾಂಕ:20.06.2024.
3) ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ಜೆ.ಪಿ ನಗರ ಶರಣ ವೇದಿಕೆ, ಮೈಸೂರು ಇವರ ಲಿಖಿತ ಹೇಳಿಕೆ ದಿನಾಂಕ:10.08.2024.
4) ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್ ಎಂ: ಸಿ12: ಸಂಸಂ: ಆಡಳಿತಾಧಿಕಾರಿ: 05: :2023-24, ದಿನಾಂಕ:24.11.2025.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ **ಜೆ.ಪಿ ನಗರ ಶರಣ ವೇದಿಕೆ**, (ನೋಂದಣಿ ಸಂಖ್ಯೆ:149/10-11), ನಂ.188, ಅಕ್ಕಮಹಾದೇವಿ ರಸ್ತೆ, 'ಬಿ' ಬ್ಲಾಕ್, ಜೆ.ಪಿ. ನಗರ, ಮೈಸೂರು-31 ಈ ಸಂಘದ ಬೈಲಾ ರೀತ್ಯ ಆಡಳಿತ ಮಂಡಳಿಯ ರಚನೆಗೆ ಚುನಾವಣೆ ನಡೆಸಲು ಕ್ರಮವಿಡದೇ, ಸರ್ವ ಸದಸ್ಯರ ಸಭೆ ನಡೆಸದೇ, ಸಂಘದ ವಾರ್ಷಿಕ ವರದಿಯನ್ನು ಫೈಲಿಂಗ್ ಮಾಡಿ ಸ್ವೀಕೃತಿಯನ್ನು ಪಡೆಯದೇ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ.11 ಮತ್ತು ಕಲಂ.13 ರ ಉಲ್ಲಂಘನೆಯಾಗಿರುವುದರಿಂದ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಶಿಫಾರಸ್ಸನ್ನು ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27(ಎ) ರೀತ್ಯಾ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಸ್ತಾವನೆಯನ್ನು ನಿಬಂಧಕರು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ಸರ್ಕಾರದ ನೋಟೀಸಿನಲ್ಲಿ ಸದರಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದೆಂದು ಲಿಖಿತ ಹೇಳಿಕೆ ಸಲ್ಲಿಸಲು ಸಂಘದ ಅಧ್ಯಕ್ಷರು/ ಕಾರ್ಯದರ್ಶಿಯವರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ (3) ರ ಸಂಘದ ಲಿಖಿತ ಹೇಳಿಕೆಯಲ್ಲಿ ಸಂಘದ ಆಡಳಿತ ಮಂಡಳಿಯ ರಚನೆಗೆ ಚುನಾವಣೆ ನಡೆಸಲು, ಸರ್ವ ಸದಸ್ಯರ ಸಭೆ ನಡೆಸಲು ಹಾಗೂ ಸಂಘದ ವಾರ್ಷಿಕ ವರದಿಯನ್ನು ಫೈಲಿಂಗ್ ಮಾಡಿ ಸ್ವೀಕೃತಿ ಪಡೆಯಲು 03 ತಿಂಗಳ ಕಾಲಾವಕಾಶ ನೀಡಲು ಕೋರಿರುತ್ತಾರೆ.

ಮೇಲೆ ಓದಲಾದ (4) ರ ಪತ್ರದಲ್ಲಿ ಸಂಘದ ಆಡಳಿತ ಮಂಡಳಿಯ ರಚನೆಗೆ ಚುನಾವಣೆ ನಡೆಸಲು, ಸರ್ವ ಸದಸ್ಯರ ಸಭೆ ಹಾಗೂ ಸಂಘದ ವಾರ್ಷಿಕ ವರದಿಯನ್ನು ಫೈಲಿಂಗ್ ಮಾಡಿ ಸ್ವೀಕೃತಿ ಪಡೆಯಲು 03 ತಿಂಗಳ ಕಾಲಾವಕಾಶ ನೀಡಲು ಸಂಘವು ಕೋರಿದ್ದು, ಆದರೆ ತಹಲ್‌ವರೆವಿಗೂ ಸಂಘದ ಚುನಾವಣೆ ನಡೆಸಿರುವ ಬಗ್ಗೆಯಾಗಲಿ, ಸರ್ವ ಸದಸ್ಯರ ಸಭೆ ನಡೆಸಿರುವ ಬಗೆಯಾಗಲಿ, ಹಾಗೂ ಸಂಘದ ವಾರ್ಷಿಕ ಲೆಕ್ಕಪತ್ರಗಳನ್ನು ಫೈಲಿಂಗ್ ಮಾಡಲು ವರದಿ/ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಸಂಘದ ಬೈಲಾದಂತೆ ಚುನಾವಣೆಯನ್ನು ನಡೆಸದೆ ಸಂಘದ ಬೈಲಾ ಉಲ್ಲಂಘನೆಯಾಗಿರುವುದರಿಂದ ಮತ್ತು ವಾರ್ಷಿಕ ಮಹಾ ಸಭೆಯನ್ನು ನಡೆಸದೆ ಹಾಗೂ ಸಂಘದ ವಾರ್ಷಿಕ ಲೆಕ್ಕಪತ್ರಗಳನ್ನು ಫೈಲಿಂಗ್ ಮಾಡಿ ಸ್ವೀಕೃತಿಯನ್ನು ಪಡೆಯದೆ ಇರುವುದು ಕ್ರಮವಾಗಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಪ್ರಕರಣ 11 ಮತ್ತು 13ರ ಉಲ್ಲಂಘನೆ ಮಾಡಿರುವುದರಿಂದ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟು ವರದಿಯನ್ನು ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ, ಸಂಘದ ಹೇಳಿಕೆ ಮತ್ತು ಉಪ ನಿಬಂಧಕರ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸಂಘದ ಹೇಳಿಕೆಯಲ್ಲಿ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು, ಸರ್ವ ಸದಸ್ಯರ ಸಭೆ ನಡೆಸಲು ಹಾಗೂ ಸಂಘದ ವಾರ್ಷಿಕ ವರದಿಯನ್ನು ಫೈಲಿಂಗ್ ಮಾಡಿ ಸ್ವೀಕೃತಿ ಪಡೆಯುವುದು ಬಾಕಿ ಇರುವುದಾಗಿ ಒಪ್ಪಿಕೊಂಡಿರುತ್ತಾರೆ.ಉಪ ನಿಬಂಧಕರ ವರದಿಯಂತೆ ಸಂಘದಿಂದ ಬೈಲಾ ಉಲ್ಲಂಘನೆಯಾಗಿರುವುದು ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಕಲಂ. 11 ಮತ್ತು 13ರ ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿ, ಆಡಳಿತಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಚುನಾವಣೆಯನ್ನು ನಡೆಸಿ ನೂತನ ಆಡಳಿತ ಮಂಡಳಿಗೆ ಪ್ರಭಾರವನ್ನು ಹಸ್ತಾಂತರಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿದೆ, ಅದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 73 ಸಿಎಸ್‌ಆರ್ 2024

ಬೆಂಗಳೂರು, ದಿನಾಂಕ: 29.12.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ **ಜೆ.ಪಿ ನಗರ ಶರಣ ವೇದಿಕೆ**, (ನೋಂದಣಿ ಸಂಖ್ಯೆ:149/10-11), ನಂ.188, ಅಕ್ಕಮಹಾದೇವಿ ರಸ್ತೆ, 'ಬಿ' ಬ್ಲಾಕ್, ಜೆ.ಪಿ. ನಗರ, ಮೈಸೂರು-31 ಈ ಸಂಘಕ್ಕೆ **ಶ್ರೀ ವಿಮಲ್‌ಕುಮಾರ್, ದ್ವಿತೀಯ ದರ್ಜೆ ಸಹಾಯಕರು, ಸಹಕಾರ**

ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಮೈಸೂರು, ಇವರನ್ನು ಈ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ ಮುಂದಿನ ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-07

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿನ ಒಟ್ಟು 1777 ಎಕರೆ -02$^{1}/_{2}$ ಗುಂಟೆ ವಿಸ್ತೀರ್ಣದ ಭೂಮಿಯನ್ನು ಹಸಿರು ವಲಯವನ್ನಾಗಿ ಮುಂದುವರೆಸುವ ಸಲುವಾಗಿ ಶಾಶ್ವತ ಕೃಷಿ ವಲಯ (Permanent Special Agriculture Zone) ಎಂದು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹಾಗೂ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ಅನುಮೋದಿತ ಮಹಾಯೋಜನೆಯಲ್ಲಿ ಅಳವಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಿಐ121 ಎಸ್‌ಪಿಕ್ಯೂ 2021, ದಿನಾಂಕ: 06.12.2025.

2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021, ದಿನಾಂಕ: 12.12.2025.

*****

ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಹೊರಡಿಸಿರುವ ದಿನಾಂಕ: 06.12.2025 ರ ಸರ್ಕಾರದ ಆದೇಶದಲ್ಲಿ, ಸಚಿವ ಸಂಪುಟದ ಅನುಮೋದನೆಯೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿನ ಒಟ್ಟು 1777 ಎಕರೆ-02$^{1}/_{2}$ ಗುಂಟೆ ವಿಸ್ತೀರ್ಣದ ಭೂಮಿಯನ್ನು ಹಸಿರು ವಲಯವನ್ನಾಗಿ ಮುಂದುವರೆಸುವ ಸಲುವಾಗಿ ಶಾಶ್ವತ ಕೃಷಿ ವಲಯ (Permanent Special Agriculture Zone) ಎಂದು ಘೋಷಿಸಲಾಗಿರುತ್ತದೆ.

ಮೇಲ್ಕಂಡ ಆದೇಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿನ ಒಟ್ಟು 1777 ಎಕರೆ-02$^{1}/_{2}$ ಗುಂಟೆ ವಿಸ್ತೀರ್ಣದ

ಭೂಮಿಯನ್ನು ಹಸಿರು ವಲಯವನ್ನಾಗಿ ಮುಂದುವರೆಸುವ ಸಲುವಾಗಿ ಶಾಶ್ವತ ವಿಶೇಷ ಕೃಷಿ ವಲಯ (Permanent Special Agriculture Zone) ಎಂದು ಘೋಷಿಸಿರುವ ಕುರಿತು ನಗರಾಭಿವೃದ್ಧಿ ಇಲಾಖೆಯು ಸಂಬಂಧಪಟ್ಟ ಸಮವರ್ತಿತ ಅಧಿಸೂಚನೆಯನ್ನು ಹೊರಡಿಸುವುದು ಎಂದು ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ಅರೆ ಸರ್ಕಾರಿ ಪತ್ರದಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರು ಮೇಲ್ಕಂಡ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಸಮವರ್ತಿತ ಅಧಿಸೂಚನೆಯನ್ನು ಹೊರಡಿಸಲು ಹಾಗೂ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿ ಶಾಶ್ವತ ಕೃಷಿ ವಲಯ (Permanent Special Agriculture Zone) ಎಂದು ನಮೂದು ಮಾಡಲು ಕೋರಿರುತ್ತಾರೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಉಲ್ಲೇಖ 1ರ ಆದೇಶದಲ್ಲಿ ಅನುಮೋದಿಸಿರುವ ಜಮೀನುಗಳು ಪ್ರಸ್ತುತ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ (BIAAPA) ಹಾಗೂ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ (STRRPA) ಸ್ಥಳೀಯ ಯೋಜನಾ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ದಿನಾಂಕ:12.12.2025ರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ನಅಇ 651 ಬಿಎಂಆರ್ 2025(ಇ),</u>
<u>ಬೆಂಗಳೂರು, ದಿನಾಂಕ:31- 12-2025.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021, ದಿನಾಂಕ: 06.12.2025 ಕ್ಕೆ ಲಗತ್ತಿಸಿರುವ ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3 ರಲ್ಲಿ ಉಲ್ಲೇಖಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿನ ಒಟ್ಟು 1777 ಎಕರೆ-02$^{1}/_{2}$ ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 12(1)(f)ರಡಿಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಹಾಗೂ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಗಳ ಅನುಮೋದಿತ ಮಹಾಯೋಜನೆಯಲ್ಲಿ ಶಾಶ್ವತ ವಿಶೇಷ ಕೃಷಿ ವಲಯ (Permanent Special Agriculture Zone) ಎಂದು ಘೋಷಿಸಿ ಆದೇಶಿಸಲಾಗಿದೆ.

ಷರತ್ತುಗಳು:

1. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಹಾಗೂ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಗಳ ಅನುಮೋದಿತ ಮಹಾಯೋಜನೆಯ ನಕ್ಷೆಗಳಲ್ಲಿ ಹಾಗೂ ವಲಯ ನಿಯಮಾವಳಿಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು;

2. ಈ ಪ್ರದೇಶದಲ್ಲಿ ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದಲ್ಲ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

3. ಸಂಬಂಧಪಟ್ಟ ಯೋಜನಾ ಪ್ರಾಧಿಕಾರಗಳು/ಸ್ಥಳೀಯ ಸಂಸ್ಥೆಗಳು ಈ ಪ್ರದೇಶದಲ್ಲಿ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಹೊರತುಪಡಿಸಿ ಇತರೆ ಯಾವುದೇ ಉದ್ದೇಶಕ್ಕೆ ಅನುಮತಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೇಶ್ ಎಸ್ ಸೂಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಬಿಡಿಎ ಮತ್ತು ಬೆಂ-1).

PR-08

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH